ಶ್ರೀ ಟಿ. ಎನ್. ಮಾದಪ್ಪಗೌಡ.—ಡಿಪಾರ್ಟುಮೆಂಟುಗಳಲ್ಲಿ ಪರೀಕ್ಷೆಗಳನ್ನು ನಡೆಸುವಂತೆ ಇಲ್ಲಿಯೂ ಏರ್ಪಾಡು ಮಾಡುವುದಕ್ಕೆ ಇನ್ನು ಮುಂದಾದರೂ ಸರಕಾರದವರು ಯೋಚನೆ ಮಾಡುತ್ತಾರೆಯೆ ?

ಶ್ರೀ ಎಸ್. ಆರ್. ಕಂಠಿ.—ಯೋಚನೆ ಮಾಡಿನೋಡೋಣ.

ಶ್ರೀ ಎಚ್. ಆರ್. ಕೇಶವಮೂರ್ತಿ.—Underqualified Teachers ತೆಗೆದು ಕೊಳ್ಳುವುದಕ್ಕೆ ಬದಲು Requisite qualifications ಇರುವವರನ್ನು ತೆಗೆದುಕೊಳ್ಳಲು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ನಾನೀಗಾಗಲೇ ಹೇಳಿದೆ, ಇವರಿಬ್ಬರು ಪಂಡಿತರು, ಅನುಭವವುಳ್ಳವರು ಮತ್ತು ೧೫ವರ್ಷಗಳಿಂದ ಕೆಲಸ ಮಾಡುತ್ತಿರುವುದರಿಂದ ಇವರನ್ನು Under qualified ಎಂದು ಹೇಳುವುದಕ್ಕಾಗುವುದಿಲ್ಲ. ಇವರಲ್ಲಿ ಶ್ರೀ ಎ. ಟಿ. ಶ್ರೀನಿವಾಸ ರಾಘವಾಚಾರ್ ಎನ್ನುವವರು ಹಿಂದೀ ರಾಷ್ಟ್ರಭಾಷಾ ವಿಶಾರದ ಪರೀಕ್ಷೆಯನ್ನು ಪಾಸು ಮಾಡಿರುವುದರಿಂದ ಇವರನ್ನು Un-qualified ಎಂದು ಹೇಳುವುದು ಬಹಳ ಕಷ್ಟ. ಅಲ್ಲದೆ ಇವರು ಅನುಭವನ್ವಿತರಾದ ಕನ್ನಡ ಪಂಡಿತರೂ, ಹಿಂದಿ ಪಂಡಿತರೂ ಆದವರು.

Starting of an Industrial Estate at Gauribidanur.

*Q.—372. **Sri R. N. LAKSHMIPATHI** (Gauribidanur).—

Will the Government be pleased to state :—

(*a*) when the proposal to start an Industrial Estate at Gauribidanur was dropped ;

(*b*) the reasons therefor ?

A.—**Sri K. MALLAPPA.** (Minister for Industries and Commerce).—

(*a*) In September 1962.

(*b*) On account of re-assessment of felt needs.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಗೌರಿಬಿದನೂರಿನಲ್ಲಿ ಇಂಡಸ್ಟ್ರಿಯಲ್ ಎಸ್ಟೇಟು ಸ್ಥಾಪನೆ ಮಾಡಬೇಕು, ಎಂದು ಅಲ್ಲಿ ಸ್ಥಳವನ್ನು ಸರಕಾರ ಗೊತ್ತು ಮಾಡಿರಲಿಲ್ಲವೇ ?

† ಶ್ರೀ ಕೆ. ಮಲ್ಲಪ್ಪ.—ಗೌರಿಬಿದನೂರಿನಲ್ಲಿ ಮೊದಲಿಗೆ ಇಂಡಸ್ಟ್ರಿಯಲ್ ಎಸ್ಟೇಟನ್ನು ಸ್ಥಾಪನೆ ಮಾಡಬೇಕೆಂದು ಸ್ಥಳವನ್ನು ನೋಡಲಾಗಿತ್ತು. ಆದರಂತೆ ಹಿಂದೆ ನಿಶ್ಚಯವೂ ಆಗಿತ್ತು. ಆದರೆ ಈ ಅಸೆಂಬ್ಲಿಯಲ್ಲಿ ಮೊದಲೇ ತಿಳಿಸಿದ್ದಂತೆ ಗೌರಿಬಿದನೂರಿಗೆ ಸಕ್ಕರೆ ಕಾರ್ಖಾನೆ ಬಂದಿದೆ. ಆದುದರಿಂದ ಈಗ ಇಂಡಸ್ಟ್ರಿಯಲ್ ಎಸ್ಟೇಟನ್ನು ಚಿಕ್ಕಬಳ್ಳಾಪುರದಲ್ಲಿ ಮಾಡಬೇಕೆಂದು ಯೋಚನೆ ಮಾಡಲಾಗಿದೆ. ಅಲ್ಲದೆ ಗೌರಿಬಿದನೂರಿನಲ್ಲಿ ಒಂದು ಒಳ್ಳೆಯ ಇಂಡಸ್ಟ್ರಿಯಲ್ ವರ್ಕ್‌ಷಾಪನ್ನು ಸ್ಥಾಪನೆ ಮಾಡಿ ಅಲ್ಲಿ Agricultural implements, Agricultural pumps, Motors ವಗೈರೆಗಳನ್ನು ಮಾಡುವಂತೆ ವರ್ಕ್‌ಷಾಪ್ ಮಾಡಿ ಟ್ರೇನಿಂಗ್ ಫೆಸಿಲಿಟೀಸ್‌ಗಳನ್ನು ಏರ್ಪಾಡು ಮಾಡಿದರೆ ಬಹಳ ಚೆನ್ನಾಗಿರುತ್ತದೆ ಎಂದು ಅದಕ್ಕೆ ತಕ್ಕಂತೆ ಒಂದು ಬಿಲ್ಡಿಂಗನ್ನೂ ನೋಡಿದ್ದೇವೆ. Immediately such a workshop will be started there. So, in view of this, the Government have changed the decision and they have now decided to shift the Industrial Estate to Chickballapur.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬೆಂಗಳೂರಿನಲ್ಲಿ ಮಾತ್ರ ಅನೇಕ ದೊಡ್ಡ ಕೈಗಾರಿಕೆಗಳಿದ್ದರೂ ಇಂಡಸ್ಟ್ರಿಯಲ್ ಎಸ್ಟೇಟು ಇದೆ. ಗೌರಿಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆ ಇದೆ ಎಂದು ಇಲ್ಲಿದ್ದ ಇಂಡಸ್ಟ್ರಿಯಲ್ ಎಸ್ಟೇಟನ್ನೂ ಚಿಕ್ಕಬಳ್ಳಾಪುರಕ್ಕೆ ಬದಲಾಯಿಸಲು ಅವಶ್ಯಕತೆ ಏನಿತ್ತು ?

ಶ್ರೀ ಕೆ. ಮಲ್ಲಪ್ಪ.—ಚಿಕ್ಕಬಳ್ಳಾಪುರದಲ್ಲಿ ಏನೂ ಇಂಡಸ್ಟ್ರಿಗಳಿಲ್ಲ. ಎಲ್ಲ ಕಡೆಯನ್ನೂ ಸಮ ದೃಷ್ಟಿಯಿಂದ ನೋಡಿ ಹಂಚುವಿಕೆಯ ಕಾರ್ಯವನ್ನು ಸರಕಾರ ಮಾಡಬೇಕಾಗಿರುವುದರಿಂದ ಚಿಕ್ಕ ಬಳ್ಳಾಪುರದಲ್ಲಿ ಏನೂ ಇಲ್ಲದ್ದರಿಂದ ಇಲ್ಲಿ ಇಂಡಸ್ಟ್ರಿಯಲ್ ಎಸ್ಟೇಟನ್ನು ಸ್ಥಾಪನೆ ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇದೇ ನೀತಿ ಬೆಂಗಳೂರಿಗೆ ಅಪ್ಲೈ ಆಗುವುದಿಲ್ಲವೆ?

ಶ್ರೀ ಕೆ. ಮಲ್ಲಪ್ಪ.—ಇಲ್ಲಿ ಖಾಸಗೀ ಕೈಗಾರಿಕೆಗಳು ಬೇಕಾದಷ್ಟಿವೆ. ಇದಲ್ಲದೆ ಕೇಂದ್ರ ಸರ್ಕಾರದವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಅದಕ್ಕೆ ಮೈಸೂರು ಸರಕಾರದವರೂ ಹೆಚ್ಚಿನ ಸೌಕರ್ಯಗಳನ್ನು ಕೊಡಬೇಕೆಂದು ಇಂಡಸ್ಟ್ರಿಯಲ್ ಎಸ್ಟೇಟ್ ಅರ್ಬನ್ ಏರಿಯಾದಲ್ಲಿ, Semi-urban Area ದಲ್ಲಿ Rural Industries ಕೊಡಬೇಕೆಂದು ವಿಶೇಷ ಅಂತರಗಳನ್ನು ಇಟ್ಟು ಕೊಂಡು ಮಾಡಿದ್ದಾರೆ.

Sri S. SIVAPPA.—Is it the intention of the Government to achieve equality by shifting one Industrial Estate from one Taluk to another Taluk?

ಶ್ರೀ ಕೆ. ಮಲ್ಲಪ್ಪ.—ಇದು ಇಂಡಸ್ಟ್ರಿಯಲ್ ಎಸ್ಟೇಟನ್ನು Shift ಮಾಡುವುದಲ್ಲ. ಈ ಸ್ಥಳ ದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟನ್ನು ಮಾಡಬೇಕೆಂದು ಸ್ಥಳ ನಿರ್ಣಯ ಆಗಿತ್ತು. ಈಗ ಈ ಎಸ್ಟೇಟನ್ನು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹಂಚುವ ತೀರ್ಮಾನ ಮಾಡಿದೆ. ಏಕೆಂದರೆ ಗೌರಿ ಬಿದನೂರಿನಲ್ಲಿ ಇತ್ತೀಚೆಗೆ ಸಕ್ಕರೆ ಕಾರ್ಖಾನೆ ಬಂದುದರಿಂದ ಚಿಕ್ಕಬಳ್ಳಾಪುರದಲ್ಲಿ ಏನೂ ಇಲ್ಲದಿದ್ದುದ ರಿಂದ ಅಲ್ಲಿಗೆ ಒಂದು Industrial workshop ಮತ್ತು Training facilities ಗಳನ್ನು ಕೊಡಬೇಕು ಎಂದು ತೀರ್ಮಾನ ಮಾಡಿದೆ. ಇಂಡಸ್ಟ್ರಿಯಲ್ ಎಸ್ಟೇಟನ್ನೆ Shift ಮಾಡುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಮಾಡುವುದು ಜನರಿಗೆ ಇಂಡಸ್ಟ್ರಿಗಳನ್ನು ತೆರೆದು ಅನುಕೂಲಮಾಡಿ ಇನ್ನೂ ಹೆಚ್ಚು ಉತ್ತೇಜನ ಕೊಡಬೇಕೆಂದುತಾನೇ?

ಶ್ರೀ ಕೆ. ಮಲ್ಲಪ್ಪ.—ಉತ್ತೇಜನ, ಕೊಡಲಿಕ್ಕೆ ಸರಕಾರ ತಯಾರಿದೆ. ಯಾರಾದರೂ ಖಾಸಗಿ ಯವರು, ಅಥವಾ ಕೋ ಆಪರೇಟಿವ್ ಸೊಸೈಟಿಯವರು, ಕಂಪನಿಗಳು ಅಥವಾ ತಾಲ್ಲೂಕು ಬೋರ್ಡಿ ನಂತಹ ಸಂಸ್ಥೆಗಳು ಇಂಡಸ್ಟ್ರಿಯಲ್ ಎಸ್ಟೇಟನ್ನು ಸ್ಥಾಪನೆ ಮಾಡಬೇಕೆಂದು ಬಂದರೆ ಸರಕಾರ ಅದಕ್ಕೆ ಬೇಕಾದ ಪ್ರೋತ್ಸಾಹ ಕೊಡಬಹುದು. ಹಾಗೇ ಯಾರಾದರೂ ಸರಕಾರದಲ್ಲಿ ಸಹಾಯವನ್ನು ಕೇಳಿದರೆ ಸಾಲವಾಗಿ ಶೇಕಡ ಎಷ್ಟತ್ತೆತ್ತಿದರಷ್ಟು ಕೊಡಬಹುದು.

ಶ್ರೀ ಇ. ನಾರಾಯಣಗೌಡ.—ಇಲ್ಲಿಗೆ ಸಕ್ಕರೆ ಕಾರ್ಖಾನೆ ಬಂದಮೇಲೆ ಈ ಇಂಡಸ್ಟ್ರಿಯಲ್ ಎಸ್ಟೇಟ್ ಸ್ಥಾಪನೆ ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ರೆಕಮೆಂಡೇಷನ್ನನ್ನು ಕಳುಹಿಸಿದ್ದಾರಲ್ಲವೇ?

ಶ್ರೀ ಕೆ. ಮಲ್ಲಪ್ಪ.—ಗೌರಿಬದನೂರಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಬೇಕೆಂದು ಮೊದಲ ನಿಂದಲೂ ಒತ್ತಾಯ ಮಾಡುತಿದ್ದೆವು. ಎರಡು, ಮೂರು ವರ್ಷಗಳ ಹಿಂದೆ ಅದರ ವಿಚಾರದಲ್ಲಿ ಅನುಮಾನ ಬಂದುದರಿಂದ ಈ ಸರಕಾರ ಕೇಂದ್ರ ಸರಕಾರಕ್ಕೆ ಪದೇ ಪದೇ ಒತ್ತಾಯ ಮಾಡಿದ ನಂತರ ಇತ್ತೀಚೆಗೆ ಈ ಕಾರ್ಖಾನೆ ಆರಂಭಿಸಲು ಅನುಮತಿ ಸಿಕ್ಕಿತು. ಇಂಡಸ್ಟ್ರಿಯಲ್ ಎಸ್ಟೇಟು ಚಿಕ್ಕಬಳ್ಳಾಪುರದಲ್ಲಿ ಆಗಬೇಕೆಂದು ಹೋದವರ್ಷ ಸೆಪ್ಟೆಂಬರು-ಅಕ್ಟೋಬರು ತಿಂಗಳಲ್ಲಿ ತೀರ್ಮಾನ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ತಾಲ್ಲೂಕ್ ಮುಂಡಳಿಯವರು ಇದನ್ನು ಒಪ್ಪಿಕೊಂಡರೆ ಕೈಗಾರಿಕಾ ಇಸ್ಟೇಟು ಕೊಡುತ್ತೀರಾ?

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ ತಾಲ್ಲೂಕ್ ಬೋರ್ಡಿಗೆ ಜವಾಬ್ದಾರಿ ವಹಿಸಿಕೊಳ್ಳಲು ಸಲಹೆ ಮಾಡಿದೆ. ಒಂದು ವೆರ್ ಇಕ್ಸಿಪ್ಟ್ ವರ್ಕ್‌ಷಾಪ್ ಕೊಡುತ್ತೇವೆ. ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ತಯಾರಿಸುವುದು, ಪಂಪ್ಸ್ ರಿಪೇರಿ ಮಾಡತಕ್ಕಂಥ ತರಪೇತಿ ಕೊಡುವ ಕೇಂದ್ರ ಸ್ಥಾಪನೆ ಮಾಡು ತ್ತೇವೆ. ಈ ವಿಚಾರವಾಗಿ ಪ್ರೆಸಿಡೆಂಟರನ್ನೂ, ಸದಸ್ಯರನ್ನೂ, ಭೇಟಿಮಾಡಿ ಹೇಳಲಾಗಿದೆ. ಅದೇ ರೀತಿಯಾಗಿ ಯಾವದೇ ತಾಲ್ಲೂಕ ಬೋರ್ಡ್ ಸಂಸ್ಥೆಯವರು ಇಂಡಸ್ಟ್ರಿಯಲ್ ಇಸ್ಟೇಟ್ ಸ್ಥಾಪನೆ ಮಾಡಲು ಮುಂದೆ ಬಂದರೆ ಯಥಾವಿಧಿಯಾಗಿ ಸಹಾಯ ಕೊಟ್ಟು ಅದನ್ನು ವಹಿಸಿಕೊಳ್ಳಲು ಸಲಹೆ ಕೊಡುತ್ತೇವೆ. ಶೇಕಡ 75ರಷ್ಟು ಸಾಲ ಕೊಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಇಂಡಸ್ಟ್ರಿಯಲ್ ಇಸ್ಟೇಟುಗಳನ್ನು ಅನೇಕ ಕಡೆ ಸ್ಥಾಪನೆ ಮಾಡಬೇಕೆಂಬ ಉದ್ದೇಶ ಹೊಂದಿರುವುದರಿಂದ ಸರಕಾರದವರು ನೇರವಾಗಿ ತಾವೇ ಮಾಡುವುದರ ಬದಲು ಒಂದು ಕಾರ್ಪೊರೇಷನ್ ಮಾಡಿ ಅದರ ಮುಖಾಂತರ ಕೆಲಸ ಮಾಡಿಸಲು ಸಾಧ್ಯವಾಗುವದಿಲ್ಲವೆ?

ಶ್ರೀ ಕೆ. ಮಲ್ಲಪ್ಪ.—ಅದನ್ನೇ ನಾನು ಹೇಳುತ್ತಿದ್ದೇನೆ. ಸರಕಾರ ಮಾಡುವುದು ಸರಿಯಲ್ಲ, ಆದಷ್ಟು ಮಟ್ಟಿಗೆ ಖಾಸಗೀ ಕ್ಷೇತ್ರದಲ್ಲಿ ಕೋ-ಆಪರೇಟಿವ್ ಕ್ಷೇತ್ರದಲ್ಲಿ ಕೈಗಾರಿಕಾ ಇಸ್ಟೇಟು ಪ್ರಾರಂಭ ಮಾಡುವುದಕ್ಕೆ ಪ್ರೋತ್ಸಾಹ ಕೊಡಬೇಕೆಂಬ ವಿವರಣೆ ಕೊಟ್ಟಿದೆ.

ಶ್ರೀ ಎನ್. ನಂಜೇಗೌಡ.—ಗೌರೀಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆ ಕೊಟ್ಟಿರುವದರಿಂದ ಕೈಗಾರಿಕಾ ಇಸ್ಟೇಟನ್ನು ಚಿಕ್ಕಬಳ್ಳಾಪುರಕ್ಕೆ ಬದಲಾವಣೆ ಮಾಡಲಾಯಿತು ಎಂದು ಹೇಳಿದಿರಿ. ಹಾಗಾದರೆ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯಿದ್ದರೂ ಸಹ ಕೈಗಾರಿಕಾ ಇಸ್ಟೇಟು ಕೊಟ್ಟಿದ್ದೀರಿ. ಈಗ ಅದನ್ನು ಬೇರೆಕಡೆ ಬದಲಾವಣೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಕೆ. ಮಲ್ಲಪ್ಪ.—ನಿಮ್ಮ ಸಲಹೆಯನ್ನು ಪರಿಶೀಲಿಸುತ್ತೇವೆ.

Sri S. RAJAGOPAL.—How many industrial estates now exist in Kolar District and how many are proposed to be established?

ಶ್ರೀ ಕೆ. ಮಲ್ಲಪ್ಪ.—ಕೆ.ಜಿ.ಎಫ್. ನಲ್ಲಿ ಒಂದು, ಚಿಕ್ಕಬಳ್ಳಾಪುರದಲ್ಲಿ ಒಂದು.

ಶ್ರೀ ಬಿ. ಚನ್ನಬೈರೇಗೌಡ.—ಸ್ಯಾಂಕ್ಷನ್ ಆಗಿದ್ದರೂ ಕೂಡ ಬೇರೆ ಕಡೆ ಇದನ್ನು ಬದಲಾಯಿಸುವುದರಲ್ಲಿ ರಾಜಕೀಯ ಕೈವಾಡ ಇದೆ ಅಲ್ಲವೆ?

Mr. SPEAKER.—The Hon'ble Member must be careful in using words like 'Kaiwada'

ಶ್ರೀ ಬಿ. ಚನ್ನಬೈರೇಗೌಡ.—Interference ಅಂದರೆ ಕೈವಾಡ ಎಂದು ಅರ್ಥ.

Mr. SPEAKER.—If the Hon'ble Member cannot help it, I have no objection.

ಶ್ರೀ ಬಿ. ಚನ್ನಬೈರೇಗೌಡ.—ಯಾವ ಆಧಾರದ ಮೇಲೆ ಈ ಬದಲಾವಣೆ ಮಾಡಿದ್ದೀರಿ? ಅದಕ್ಕೆ ಕಾರಣವೇನು?

ಶ್ರೀ ಕೆ. ಮಲ್ಲಪ್ಪ.—ನ್ಯಾಯದೃಷ್ಟಿಯಿಂದ ಈಗ ಬದಲಾವಣೆ ಮಾಡಿರುವುದು ಸಮರ್ಪಕವಾಗಿದೆ ಎಂದು ನನ್ನ ಭಾವನೆ.

ಶ್ರೀ ಎಸ್. ಶಿವಪ್ಪ.—ಎಲ್ಲ ತಾಲ್ಲೂಕುಗಳಿಗೆ ಕೈಗಾರಿಕಾ ಇಸ್ಟೇಟು ಕೊಡಬೇಕೆಂಬ ಉದ್ದೇಶ ಸರಕಾರ ಹೊಂದಿರುವಾಗ್ಗೆ ಗೌರೀಬಿದನೂರಿನಲ್ಲಿ ಒಂದು ಚಿಕ್ಕಬಳ್ಳಾಪುರದಲ್ಲಿ ಒಂದು ಹೀಗೆ ಎರಡು ಕಡೆ ಮಾಡುವುದಕ್ಕೆ ಸರಕಾರಕ್ಕೆ ಇರುವ ತೊಂದರೆ ಏನು ಸ್ವಾಮಿ?

ಶ್ರೀ ಕೆ. ಮಲ್ಲಪ್ಪ.—ಈ ಬಾಬಿಗೆ ಇರತಕ್ಕಂಥ 120 ಲಕ್ಷ ರೂ. ಹಣದಲ್ಲಿ ಎಲ್ಲ ಕೆಲಸವಾಗಬೇಕಾಗಿದೆ. ಒಟ್ಟು 38 ಇಂಡಸ್ಟ್ರಿಯಲ್ ಇಸ್ಟೇಟ್ ಸ್ಥಾಪನೆ ಮಾಡಬೇಕೆಂಬ ಉದ್ದೇಶವಿದೆ. ಇದರಲ್ಲಿ ಈಗಾಗಲೇ 8 ಆಗಿವೆ ಇನ್ನೂ 30 ಆಗಬೇಕಾಗಿದೆ. ಯಾವದೇ ಒಂದು ಸ್ಥಳದಲ್ಲಿ ಆದನ್ನು ಕಡಿಮೆ ಮಾಡುವುದಾದರೆ ಅಲ್ಲಿ ಅವರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಕೈಗಾರಿಕಾ ಇಸ್ಟೇಟಿನಲ್ಲಿ ಗೌರೀಬಿದನೂರಿನಿಂದ ಚಿಕ್ಕಬಳ್ಳಾಪುರಕ್ಕೆ ಬದಲಾವಣೆ ಮಾಡಿದೆ. ಸಕ್ಕರೆ ಕಾರ್ಖಾನೆ ಇದೆಯೆಂದು ಇಂಡಸ್ಟ್ರಿಯಲ್ ಇಸ್ಟೇಟ್ ಕೊಡದೇ ಇರುವುದು ಸಮಂಜಸವಾಗಿಲ್ಲ ಅಲ್ಲವೇ?

ಶ್ರೀ ಕೆ. ಮಲ್ಲಪ್ಪ.—ನಾನು ಸ್ಪಷ್ಟವಾಗಿ ಹೇಳಿದೆ. ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಗೌರೀಬಿದನೂರು ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಾರೆ. ಅದು ಹಿಂದುಳಿದ ಪ್ರದೇಶವೆಂದು ಕೇಂದ್ರ ಸರಕಾರದಿಂದ ಒಪ್ಪಿಗೆ ತರಿಸಿಕೊಂಡು ಸಕ್ಕರೆ ಕಾರ್ಖಾನೆ ಗೌರೀಬಿದನೂರಿಗೆ ಕೊಟ್ಟಿದೆ. ಆದರೆ ಏನೂ ಇಲ್ಲದೇ ಇರುವ ಚಿಕ್ಕಬಳ್ಳಾಪುರಕ್ಕೆ ಈ ಸಣ್ಣ ಕೈಗಾರಿಕಾ ಎಸ್ಟೇಟನ್ನು ವರ್ಗಾಯಿಸುವುದರಿಂದ ಸದಸ್ಯರು ವಿಷಾದ ಪಡಬಾರದು ಎಂದು ಸೂಚಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಎರಡೂ ಕಡೆ ಕೈಗಾರಿಕಾ ಎಸ್ಟೇಟ್ ಕೊಡುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಕೆ. ಮಲ್ಲಪ್ಪ.—ಒಟ್ಟು ಇರತಕ್ಕಂಥ ಹಣ 120 ಲಕ್ಷ ಇದೆ. ಒಂದು ಕಡೆ ಇಂಡಸ್ಟ್ರಿಯಲ್ ಎಸ್ಟೇಟು ಹೆಚ್ಚು ಮಾಡುವದಾದರೆ ಇನ್ನೊಂದು ಕಡೆ ಕಡಿಮೆ ಮಾಡಬೇಕಾಗುತ್ತದೆ. ಮೊದಲು ಎಲ್ಲ ಕೊಡಬೇಕೆಂದು ನಿಗದಿಯಾಗಿದೆಯೋ ಅಲ್ಲಿ ಕೊಡದೇ ಇದ್ದರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇದರಿಂದ ಯಾವ ಉಪಯೋಗವಾಗುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಗೌರೀಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆ ಬಂದಿರುವುದರಿಂದ ಕೈಗಾರಿಕಾ ಇಸ್ಟೇಟನ್ನು ಮತ್ತೊಂದು ಕಡೆ ಬದಲಾವಣೆ ಮಾಡಬೇಕಾಯಿತು ಎಂದು ಹೇಳಿದಿರಿ. ಹಾಗಾದರೆ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಇದ್ದರೂ ಕೂಡ ಇಂಡಸ್ಟ್ರಿಯಲ್ ಎಸ್ಟೇಟ್ ಏಕೆ ಕೊಟ್ಟಿದ್ದೀರಿ?

ಶ್ರೀ ಕೆ. ಮಲ್ಲಪ್ಪ.—ಕೆಲವು ತೀರ್ಮಾನಗಳಿಗೆ ಅನುಸಾರವಾಗಿ ಮಂಡ್ಯದಲ್ಲಿ ಕೊಡಲಾಗಿದೆ. ಆದರೆ ಅಸೆಂಬ್ಲಿ ಸದಸ್ಯರ ಅಭಿಪ್ರಾಯದಲ್ಲಿ ಅಲ್ಲಿ ಕೊಡುವುದು ಬೇಡ ಎಂದು ಸೂಚಿಸಿದರೆ ಸರಕಾರ ಅದನ್ನು ಆಲೋಚನೆ ಮಾಡುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಗೌರೀಬದನೂರಿಗೆ ಪಕ್ಷಪಾತವಾಗಿದೆ ಎಂದು ಹೇಳಬೇಕಾಗುತ್ತದೆ. ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಇದ್ದರೂ ಸಹ ಕೊಟ್ಟಿದ್ದೀರಿ. ದೊಡ್ಡದೊಡ್ಡ ಪಟ್ಟಣಗಳಲ್ಲಿ ದೊಡ್ಡದೊಡ್ಡ ಕೈಗಾರಿಕೆಗಳು ಇದ್ದರೂ ಕೂಡ ಇಂಡಸ್ಟ್ರಿಯಲ್ ಎಸ್ಟೇಟ್ ಕೊಟ್ಟಿದ್ದೀರಿ. ಗೌರೀಬದನೂರಿನಲ್ಲಿ ಸಕ್ಕರೆ ಕಾರ್ಖಾನೆ ಇದೆಯೆಂದು ಕೊಡದೇ ಇರುವುದು ಜನರಿಗೆ ಅಸಮಾಧಾನ ಉಂಟುಮಾಡಿದೆ. ಇದು ಅನ್ಯಾಯವಾಗುವುದು ಅಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ಅಸಮಾಧಾನ ಪಡುವುದಕ್ಕೆ ಕಾರಣವಿಲ್ಲ. ಒಂದು ದೊಡ್ಡ well equipped work shop ಕೊಡಬೇಕು ಎನ್ನುವುದನ್ನು ಒಪ್ಪಿಕೊಂಡಿದೆ. ವ್ಯವಸಾಯಕ್ಕೆ ಬೇಕಾಗುವ ಸಲಕರಣೆ ತಯಾರು ಮಾಡುವುದು, ಇರಿಗೇಷನ್ ಪಂಪ್ಸ್ ರಿಪೇರಿ ಮಾಡುವುದನ್ನು ತರಬೇತಿ ಕೊಡುವುದು ಇದರಲ್ಲಿದೆ. ಹೆಂಗಸರಿಗಾಗಿ ಒಂದು occupational institute ಏರ್ಪಾಡು ಮಾಡಬೇಕೆಂಬುದು ಆಲೋಚನೆಯಲ್ಲಿದೆ. ಇಷ್ಟು ಕೊಟ್ಟಿರುವುದರಿಂದ ಅಸಮಾಧಾನ ಪಟ್ಟುಕೊಳ್ಳಲು ಏನೇನೂ ಕಾರಣವಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ನಿಮ್ಮ ಉತ್ತರದ ಧಾಟಿ ನೋಡಿದರೆ, ಮಂಡ್ಯಕ್ಕೆ ಕೊಟ್ಟಿರುವುದನ್ನು ವಾಪಸ್ ತೆಗೆದುಕೊಳ್ಳುವ ಸಂಭವ ಏನಾದರೂ ಇದೆಯೆ ?

ಶ್ರೀ ಕೆ. ಮಲ್ಲಪ್ಪ.—ನಾನು ಹಾಗೆ ಹೇಳಲಿಲ್ಲ. ಅಸೆಂಬ್ಲಿಯ ಸದಸ್ಯರ ಅಭಿಪ್ರಾಯ ಏನಿದೆಯೋ, ಎಲ್ಲರ ಅಭಿಪ್ರಾಯ ಹೇಗೆ ಇದೆಯೋ ಹಾಗೆ ಮಾಡಬೇಕಾಗುತ್ತದೆ.

Government cannot act independently of the Legislature. Government has to respect the opinion of the Legislature.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಾರ್ವತ್ರಿಕ ಚುನಾವಣೆಯಾದಮೇಲೆ ಕೇಂದ್ರ ಸರಕಾರದ ಕೈಗಾರಿಕಾ ಮಂತ್ರಿಗಳು ಇದರಲ್ಲಿ ಕೈಹಾಕಿ, ಗೌರೀಬದನೂರಿನಲ್ಲಿ ನಿಮಗೆ ಓಟು ಬರಲಿಲ್ಲ ಎಂದು ಚಿಕ್ಕಬಳ್ಳಾಪುರಕ್ಕೆ ಬದಲಾವಣೆ ಮಾಡಲಾಗಿದೆ ಎಂದು ಜನ ಅನ್ನುತ್ತಿದ್ದಾರೆ ಎಂಬುದು ನಿಜವೇ ಅಥವಾ ಅಲ್ಲವೇ ಹೇಳಬೇಕು ?

ಶ್ರೀ ಕೆ. ಮಲ್ಲಪ್ಪ.—ನಿಜವಲ್ಲ.

Circulars, Notifications, etc., issued to the Marathi Schools in North Kanara District.

* *Q.*—47. **Sri B. R. SUNTHANKAR** (Belgaum city) [on behalf of **Sri B. P. KADAM** (Karwar)].—

Will the Government be pleased to state :—

(*a*) whether it is a fact that the circulars, notifications, letters and orders issued to the Marathi Schools in the North Kanara District by the Administrative Officer, District School Board, North Kanara are in Kannada ;

(*b*) whether it is a fact that the Marathi Teachers find it very difficult to follow the above Circulars, etc. ?

A.—**Sri S. R. KANTHI** (Minister for Education).—

(*a*) Yes.

(*b*) No.

Sri B. R. SUNTHANKAR.—May I know whether it is a fact that the former Bombay Government were sending circulars, etc., in Marathi ?

† **Sri S. R. KANTHI.**—Sir, in Karwar since the establishment of the District School Boards in 1926, circulars, notifications, and letters and orders are sent in Kannada.